# ಅಧ್ಯಾಯ–III
# ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕ

## 3.1 ತೆರಿಗೆ ನಿರ್ವಹಣೆ

ರಾಜ್ಯದಲ್ಲಿ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳ ಸ್ವೀಕೃತಿಗಳು, ಭಾರತೀಯ ಮುದ್ರಾಂಕ ಶುಲ್ಕ, 1899, ಕರ್ನಾಟಕ ಮುದ್ರಾಂಕ ಸುಂಕ ಅಧಿನಿಯಮ, 1957, ನೋಂದಣಿ ಅಧಿನಿಯಮ, 1908 ಹಾಗೂ ಅವುಗಳ ಅಡಿಯಲ್ಲಿ ರೂಪಿಸಿರುವ ನಿಯಮಗಳಿಂದ ನಿರ್ವಹಿಸಲ್ಪಡುತ್ತವೆ. ಕರ್ನಾಟಕದಲ್ಲಿ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳ ವಿಧಿಸುವಿಕೆ ಹಾಗೂ ಸಂಗ್ರಹಣೆ/ವಸೂಲಾತಿಯು ಸರ್ಕಾರದ ಮಟ್ಟದಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಂದ ನಿರ್ವಹಿಸಲ್ಪಡುತ್ತದೆ. ನೋಂದಣಿಯ ಇನ್ಸ್‌ಪೆಕ್ಟರ್ ಜನರಲ್ ಮತ್ತು ಮುದ್ರಾಂಕಗಳ ಶುಲ್ಕ ಆಯುಕ್ತರವರು ಮುದ್ರಾಂಕ ಮತ್ತು ನೋಂದಣಿ ಇಲಾಖೆಯ ಮುಖ್ಯಸ್ತರು, ಇವರಿಗೆ ನೋಂದಣಿ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆ ಹಾಗೂ ಆಡಳಿತದ ಜವಾಬ್ದಾರಿಯ ಜೊತೆ ಅಧಿಕಾರವನ್ನು ನೀಡಲಾಗಿದೆ. ರಾಜ್ಯದಲ್ಲಿ 34 ಜಿಲ್ಲಾ ನೋಂದಣಿ ಅಧಿಕಾರಿಯವರ ಕಚೇರಿಗಳು (ಡಿಆರ್) ಹಾಗೂ 242 ಉಪ–ನೋಂದಣಿ ಅಧಿಕಾರಿಗಳ ಕಚೇರಿಗಳು ಇವೆ.

## 3.2 ಆಂತರಿಕ ಲೆಕ್ಕಪರಿಶೋಧನೆ

ಆಂತರಿಕ ಲೆಕ್ಕಪರಿಶೋಧನಾ ಕೋಶವನ್ನು ಡಿಸೆಂಬರ್ 2012ರಲ್ಲಿ ರಚಿಸಲಾಗಿದೆ ಎಂಬುದಾಗಿ ಇಲಾಖೆಯು ತಿಳಿಸಿತಾದರೂ, ಸಿಬ್ಬಂದಿ ಕೊರತೆಯ ಕಾರಣ ಅದು ಇನ್ನೂ ಕಾರ್ಯಾರಂಭಗೊಂಡಿಲ್ಲ (ಸೆಪ್ಟೆಂಬರ್ 2014).

## 3.3 ಲೆಕ್ಕಪರಿಶೋಧನೆಯ ಫಲಿತಾಂಶ

2013–14 ಸಾಲಿನಲ್ಲಿ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯ 132 ಕಚೇರಿಗಳ ದಾಖಲೆಗಳನ್ನು ನಾವು ಪರೀಕ್ಷಾ–ಪರಿಶೀಲನೆ ಮಾಡಿದೆವು, ಅದು 261 ಪ್ರಕರಣಗಳಲ್ಲಿ ₹ 45.15 ಕೋಟಿ ಮೊತ್ತವು ಒಳಗೊಂಡಂತೆ, ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕಗಳನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು ಹಾಗೂ ಮತ್ತಿತರ ನಿಯಮಬಾಹಿರತೆಗಳನ್ನು ತೋರಿಸಿಕೊಟ್ಟಿತು, ಅವು ಈ ಕೆಳಗಿನ ಕೋಷ್ಟಕ 3.1ರಲ್ಲಿ ನೀಡಲಾಗಿರುವ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ:

**ಕೋಷ್ಟಕ 3.1**

**(₹ ಕೋಟಿಯಲ್ಲಿ )**

| ಕ್ರಮ ಸಂಖ್ಯೆ | ಪ್ರವರ್ಗ | ಪ್ರಕರಣಗಳ ಸಂಖ್ಯೆ | ಮೊತ್ತ |
|---|---|---|---|
| 1 | ದಸ್ತಾವೇಜುಗಳನ್ನು ತಪ್ಪಾಗಿ ವರ್ಗೀಕರಿಸಿದ್ದುದು | 36 | 34.94 |
| 2 | ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು/ವಿಧಿಸದೇ ಇದ್ದುದು | 69 | 3.83 |
| 3 | ಮಾರುಕಟ್ಟೆ ಮೌಲ್ಯವನ್ನು ತಪ್ಪಾಗಿ ಅನ್ವಯಿಸಿದ್ದುದು | 87 | 2.40 |
| 4 | ವಾಸ್ತವಾಂಶಗಳನ್ನು ಬಚ್ಚಿಟ್ಟಿದ್ದುದು | 27 | 1.53 |
| 5 | ಸರ್ಕಾರದ ಲೆಕ್ಕಕ್ಕೆ ಪಾವತಿಸುವಲ್ಲಿನ ವಿಳಂಬ | 25 | 1.12 |
| 6 | ಇತರೆ ನಿಯಮಬಾಹಿರತೆಗಳು | 17 | 1.33 |
| | **ಒಟ್ಟು** | **261** | **45.15** |

ಪ್ರಸಕ್ತ ಸಾಲಿನಲ್ಲಿ, ಇಲಾಖೆಯು ₹ 1.02 ಕೋಟಿ ಮೊತ್ತವು ಒಳಗೊಂಡಂತೆ 116 ಪ್ರಕರಣಗಳಲ್ಲಿ ನಿರ್ಧಾರಣೆಗಳನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಹಾಗೂ ಇನ್ನಿತರೆ ಲೋಪದೋಷಗಳನ್ನು ಒಪ್ಪಿಕೊಂಡಿತು ಹಾಗೂ ವಸೂಲಾತಿ ಮಾಡಿತು. ₹ 3.84 ಕೋಟಿ ಮೊತ್ತವು ಒಳಗೊಂಡಂತೆ, ಕೆಲವು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳ ಯಥಾರ್ಥತೆಯಿಂದ ಕೂಡಿದ ಮೊತ್ತವನ್ನು ನಿರ್ಧಾರಣೆ ಮಾಡುವಲ್ಲಿನ ತಮ್ಮ ವಿಫಲತೆಗಾಗಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಉತ್ತರದಾಯಿತ್ವವನ್ನು/ಜವಾಬ್ದಾರಿಯನ್ನು ಹೊರಿಸಬೇಕು.

## 3.4 ಆಸ್ತಿಗಳಿಗೆ ಕಡಿಮೆ ಬೆಲೆ ಕಟ್ಟಿದ್ದ ಕಾರಣ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದು

ಕರ್ನಾಟಕ ಮುದ್ರಾಂಕ ಶುಲ್ಕ ಅಧಿನಿಯಮದ ಅಡಿಯಲ್ಲಿ, 2012–13 ಸಾಲಿಗೆ, ಆಸ್ತಿಯ *ಸಾಧನದ ವಿಷಯಕ ವಸ್ತುವಾಗಿರುವ ಯಾವುದೇ ಆಸ್ತಿಯ* 'ಮಾರುಕಟ್ಟೆ ಮೌಲ್ಯದ'[1] ಮೇಲೆ ಶೇಕಡಾ ಐದರ ದರದಲ್ಲಿ ಮುದ್ರಾಂಕ

[1] 'ಮಾರುಕಟ್ಟೆ ಮೌಲ್ಯ' ಅಂದರೆ ಒಂದು ಆಸ್ತಿಯನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದಲ್ಲಿ ಅಂತಹ ಸಾಧನವನ್ನು ಕಾರ್ಯಗತಗೊಳಿಸುವ ದಿನಾಂಕದಂದು ಪಡೆಯಬಹುದಾದ ಬೆಲೆ ಅಥವಾ ಸಾಧನದಲ್ಲಿ ನಮೂದಿಸಲಾಗಿರುವ ಪ್ರತಿಫಲ, ಇವುಗಳಲ್ಲಿ ಯಾವುದು ಅಧಿಕವೋ ಅದು.

ಶುಲ್ಕವನ್ನು ವಿಧಿಸತಕ್ಕದ್ದು. 2011–12 ಸಾಲಿಗೆ ಮುದ್ರಾಂಕ ಶುಲ್ಕದ ದರವು ಶೇಕಡಾ ಆರು ಆಗಿದ್ದಿತು. ಸ್ಥಿರಾಸ್ತಿಗಳ ಸಾಧನಗಳ ವರ್ಗಾವಣೆಯು ಮುದ್ರಾಂಕ ಶುಲ್ಕದ ಮೇಲೆ ಶೇಕಡಾ ಹತ್ತರ ದರದಲ್ಲಿ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಆಕರ್ಷಿಸುತ್ತದೆ. ಇದರ ಜೊತೆಗೇ, ವಿಧಿಸಲಾದ ಮುದ್ರಾಂಕ ಶುಲ್ಕದ ಮೇಲೆ ಶೇಕಡಾ ಎರಡರ ದರದಲ್ಲಿ ಅಧಿಕಕರ/ಸರ್‌ಚಾರ್ಜನ್ನೂ ಸಹ ವಿಧಿಸತಕ್ಕದ್ದು. ಮುಂದುವರೆದು, ನೋಂದಣಿ ಅಧಿನಿಯಮ, 1908ರ ಅಡಿಯಲ್ಲಿ ಆಸ್ತಿಯ 'ಮಾರುಕಟ್ಟೆ ಮೌಲ್ಯ'ದ ಶೇಕಡಾ ಒಂದರ ದರದಲ್ಲಿ ನೋಂದಣಿ ಶುಲ್ಕವನ್ನು ವಿಧಿಸಬೇಕು.

ಮೇಲೆ ತಿಳಿಸಲಾದ ಅಧಿನಿಯಮದ ಪರಿಚ್ಛೇದ 45ಎ(1)ರ ಪ್ರಕಾರ, " ನೋಂದಣಿ ಅಧಿನಿಯಮ, 1908ರ ಅಡಿಯಲ್ಲಿ ನೇಮಕಗೊಂಡ ನೋಂದಣಿ ಅಧಿಕಾರಿಯವರು, ಈ ಕೆಳಗಿನ ಯಾವುದೇ ಸಾಧನವನ್ನು ನೋಂದಣಿ ಮಾಡುವ ವೇಳೆಯಲ್ಲಿ (ಎ) ಆಸ್ತಿಯ ವರ್ಗಾವಣೆ: ಪರಿಚ್ಛೇದ 45–ಬಿ[2] ಅಡಿಯಲ್ಲಿ ರಚಿಸಲಾದ ಸಮಿತಿಯಿಂದ ಪ್ರಕಟಗೊಂಡಿರುವ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯವನ್ನು ಗಮನದಲ್ಲಿಟ್ಟುಕೊಂಡು ಯಾವುದಾದರೂ ಇದ್ದಲ್ಲಿ, ಅಥವಾ ಬೇರೆ ರೀತಿಯಲ್ಲಿ, ಅಂತಹ ಸಾಧನಗಳ ವಿಷಯಕ ಸಾಧನವಾಗಿರುವ ಆಸ್ತಿಯ ಮಾರುಕಟ್ಟೆ ಮೌಲ್ಯವನ್ನು ವಾಸ್ತವವಾಗಿ ವಿವರಿಸಿಲ್ಲ ಎಂಬುದಾಗಿ ಭಾವಿಸಲು ಯಾವುದಾದರೂ ಕಾರಣಗಳಿದ್ದಲ್ಲಿ, ಅವರು ಮಾರ್ಗಸೂಚಿ ಮಾರುಕಟ್ಟೆ ಮೌಲ್ಯವನ್ನು ಲೆಕ್ಕಹಾಕಿದನಂತರ, ಸಂಬಂಧಿಸಿದ ತಂಡಗಳಿಗೆ ತಿಳಿಸಿ ಹಾಗೂ ಅಂತಹ ಮೌಲ್ಯನಿರ್ಣಯದ ಆಧಾರದ ಮೇರೆಗೆ ತಂಡಗಳು ಮುದ್ರಾಂಕ ಶುಲ್ಕವನ್ನು ಪಾವತಿಸಿದ ಹೊರತು ನೋಂದಣಿ ಪ್ರಕ್ರಿಯೆಯನ್ನು ಬಾಕಿ ಇಡತಕ್ಕದ್ದು ಹಾಗೂ ಆಸ್ತಿಯ ಮಾರುಕಟ್ಟೆ ಮೌಲ್ಯವನ್ನು ಹಾಗೂ ಅದರ ಮೇಲೆ ಪಾವತಿಸಬೇಕಾದ ಯಥಾರ್ಥತೆಯಿಂದ ಕೂಡಿದ ಮುದ್ರಾಂಕ ಶುಲ್ಕವನ್ನು ನಿರ್ಧಾರಣೆ ಮಾಡುವುದಕ್ಕಾಗಿ, ಈ ವಿಷಯವನ್ನು ಅಂತಹ ಸಾಧನದ ಒಂದು ಪ್ರತಿಯೊಂದಿಗೆ ಉಪ ಆಯುಕ್ತರವರಿಗೆ ಕಳುಹಿಸಿಕೊಡತಕ್ಕದ್ದು".

ಕರ್ನಾಟಕ ಮುದ್ರಾಂಕ ಶುಲ್ಕ ಅಧಿನಿಯಮದ ಷೆಡ್ಯೂಲಿನ ಕಲಮು 5(ಇ) ಅಡಿಯಲ್ಲಿ, ಆಸ್ತಿಯ ಒಡೆತನವನ್ನು ನೀಡಿದ್ದಲ್ಲಿ ಸ್ಥಿರಾಸ್ತಿಯನ್ನು ಮಾರಾಟ ಮಾಡುವುದಕ್ಕಾಗಿನ ಒಡಂಬಡಿಕೆಯ ಮೇಲೆ ವರ್ಗಾವಣೆಯ ರೀತಿಯಲ್ಲಿ ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲಿನ ಮುದ್ರಾಂಕ ಶುಲ್ಕವನ್ನು ವಿಧಿಸತಕ್ಕದ್ದು. ಕರ್ನಾಟಕ ಮುದ್ರಾಂಕ ಶುಲ್ಕ ಅಧಿನಿಯಮದ ಕಲಮು 41(ಇ) ಅಡಿಯಲ್ಲಿ ನೋಂದಣಿ ಮಾಡಿಸಲಾಗಿರುವ 'ವ್ಯವಹಾರಾಧಿಕಾರ'ಕ್ಕೆ ಸಂಬಂಧಿಸಿದಂತೆ ವರ್ಗಾವಣೆಯ ರೀತಿಯಲ್ಲಿಯೇ ಮುದ್ರಾಂಕ ಶುಲ್ಕವನ್ನು ವಿಧಿಸಬೇಕು.

ಹದಿಮೂರು[3] ಉಪ–ನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ ಏಪ್ರಿಲ್ 2013 ಹಾಗೂ ಫೆಬ್ರವರಿ 2014ರ ನಡುವಿನ ಅವಧಿಯಲ್ಲಿ ದಾಖಲೆಗಳನ್ನು ಪರಿಶೀಲಿಸಲಾಗಿ, 28 ಮಾರಾಟ/ಕ್ರಯ ಪತ್ರಗಳು, ಆಸ್ತಿಯ ಒಡೆತನವನ್ನು ಕೊಳ್ಳುವವರಿಗೆ ನೀಡುವುದರೊಂದಿಗೆ ಮಾರಾಟ ಮಾಡುವ ನಾಲ್ಕು ಒಡಂಬಡಿಕೆಗಳು ಹಾಗೂ ಎರಡು ವ್ಯವಹಾರಾಧಿಕಾರಗಳು, ವರ್ಗಾವಣೆಗೆ ಅನ್ವಯಿಸುವ ದರದಲ್ಲಿ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ವಿಧಿಸುವುದನ್ನು ಆಕರ್ಷಿಸುತ್ತಿದ್ದ ಇವೆಲ್ಲವನ್ನೂ ಆಗಸ್ಟ್ 2010 ಹಾಗೂ ಏಪ್ರಿಲ್ 2013ರ ನಡುವಿನ ಅವಧಿಯಲ್ಲಿ ನೋಂದಣಿ ಮಾಡಲಾಗಿದ್ದಿತು ಎಂಬುದನ್ನು ಗಮನಿಸಲಾಯಿತು. ಈ ಸಾಧನಗಳ ವಿಷಯಕ ಸಾಧನಗಳಾಗಿದ್ದ ಆಸ್ತಿಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ಮಾರುಕಟ್ಟೆ ಮೌಲ್ಯವನ್ನು ₹ 24.03 ಕೋಟಿ ಎಂಬುದಾಗಿ ತೋರಿಸಲಾಗಿದ್ದಿತು. ಈ ದಸ್ತಾವೇಜುಗಳ ಮೇಲೆ ವಿಧಿಸಲಾಗಿದ್ದ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವು ಅನುಕ್ರಮವಾಗಿ ₹ 1.40 ಕೋಟಿ ಹಾಗೂ ₹ 23.96 ಲಕ್ಷ ಆಗಿದ್ದಿತು.

ಈ ಪ್ರಕರಣಗಳಲ್ಲಿ ದಸ್ತಾವೇಜುಗಳಲ್ಲಿ ಪರಿಗಣಿಸಲಾಗಿದ್ದ ಆಸ್ತಿಗಳ ಮೌಲ್ಯವನ್ನು ಸರ್ಕಾರದಿಂದ ಅಧಿಸೂಚಿಸಲ್ಪಟ್ಟಿದ್ದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದ ಜೊತೆ ಮಾಡಲಾದ ಅಡ್ಡಪರಿಶೀಲನೆಯು, ಕಾರ್ಯಗತಗೊಳಿಸಿದವರು ಎಲ್ಲಾ ದಸ್ತಾವೇಜುಗಳಲ್ಲಿಯೂ ಆಸ್ತಿಗಳ ಮೌಲ್ಯವನ್ನು ಕಡಿಮೆ ಪ್ರಮಾಣದಲ್ಲಿ ಘೋಷಿಸಿದ್ದರು ಎಂಬುದನ್ನು ತೋರಿಸಿಕೊಟ್ಟಿತು. ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದ ಪ್ರಕಾರ ಈ ಪ್ರಕರಣಗಳಲ್ಲಿನ ಆಸ್ತಿಗಳ ಒಟ್ಟಾರೆ ಮಾರುಕಟ್ಟೆ ಮೌಲ್ಯವು ₹ 45.67 ಕೋಟಿ ಆಗುತ್ತದೆ. ಅಧಿಸೂಚಿತ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದ ಪ್ರಕಾರ ಆಸ್ತಿಗಳ ಮೌಲ್ಯವನ್ನು, ಹಾಗೂ ಅದರ ಪ್ರಕಾರ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ನಿರ್ಧಾರಣೆ ಮಾಡುವಲ್ಲಿ ಸಂಬಂಧಿತ ಉಪ–ನೋಂದಣಿ ಅಧಿಕಾರಿಗಳು ಕೂಡ ವಿಫಲರಾದರು. ಇದು ₹ 1.23 ಕೋಟಿ ಮೊತ್ತದಷ್ಟು ಮುದ್ರಾಂಕ ಶುಲ್ಕ ಹಾಗೂ ₹ 21.76 ಲಕ್ಷ ಮೊತ್ತದಷ್ಟು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿತು.

---

[2] ಒಂದು ಕೇಂದ್ರ ಮೌಲ್ಯಮಾಪನ ಸಮಿತಿಯನ್ನು ಇನ್ಸ್‌ಪೆಕ್ಟರ್ ಜನರಲ್ ಮತ್ತು ಮುದ್ರಾಂಕ ಶುಲ್ಕ ಆಯುಕ್ತರವರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿನ ಯಾವುದೇ ಪ್ರದೇಶದಲ್ಲಿ ಆಸ್ತಿಗಳ ಮಾರುಕಟ್ಟೆ ಮೌಲ್ಯವನ್ನು ಒಂದು ನಿರ್ದಿಷ್ಟ ಅಂತರಗಳಲ್ಲಿ ಅಂದಾಜು ಮಾಡುವುದು, ಪ್ರಕಟಿಸುವುದು ಹಾಗೂ ಪರಿಷ್ಕರಿಸುವುದಕ್ಕಾಗಿ ರಚಿಸಲಾಗುವುದು. ಕೇಂದ್ರ ಮೌಲ್ಯಮಾಪನ ಸಮಿತಿಯು, ರಾಜ್ಯದಲ್ಲಿನ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದ ಕಾರ್ಯನೀತಿಯನ್ನು ರೂಪಿಸುವುದು, ವಿಧಿವಿಧಾನಗಳು ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಒಂದು ಅಂತಿಮ ಪ್ರಾಧಿಕಾರ.

[3] ಉಪ–ನೋಂದಣಿ ಅಧಿಕಾರಿಗಳು, ಬೆಳಗಾವಿ, ಬೇಗೂರು, ಬಿಜಾಪುರ, ಭಟ್ಕಳ, ಬ್ಯಾಟರಾಯನಪುರ, ಚಿಕ್ಕಮಗಳೂರು, ಚಿತ್ರದುರ್ಗ, ದೊಡ್ಡಬಳ್ಳಾಪುರ, ಹಿರಿಯೂರು, ಕೋಲಾರ, ಪೀಣ್ಯಾ, ಶಿವಾಜಿನಗರ ಮತ್ತು ತುಮಕೂರು.

ಈ ಪ್ರಕರಣಗಳನ್ನು ಸಂಬಂಧಿತ ಉಪ–ನೋಂದಣಿ ಅಧಿಕಾರಿಗಳಿಗೆ ಏಪ್ರಿಲ್ 2013 ಹಾಗೂ ಫೆಬ್ರವರಿ 2014ರ ನಡುವಿನ ಅವಧಿಯಲ್ಲಿ ಸ್ಪಷ್ಟಪಡಿಸಿದನಂತರ ಒಂದು ಪ್ರಕರಣದಲ್ಲಿ ₹ 60,592/– ನ್ನು ವಸೂಲಾತಿ ಮಾಡುವುದಾಗಿ ಭಟ್ಕಳದ ಉಪ–ನೋಂದಣಿ ಅಧಿಕಾರಿಯವರು ತಿಳಿಸಿದರು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವು ಸ್ವೀಕೃತಗೊಂಡಿರುವುದಿಲ್ಲ (ಅಕ್ಟೋಬರ್ 2014).

ಲೆಕ್ಕಪರಿಶೋಧನೆಯು ಈ ಅಂಶಗಳನ್ನು ನೋಂದಣಿಯ ಇನ್ಸ್‌ಪೆಕ್ಟರ್ ಜನರಲ್ ಮತ್ತು ಮುದ್ರಾಂಕ ಶುಲ್ಕ ಆಯುಕ್ತರವರಲ್ಲಿಯೂ ಕೈಗೆತ್ತಿಕೊಂಡಿತು (ಏಪ್ರಿಲ್ ಮತ್ತು ಜೂನ್ 2014ರ ನಡುವೆ) ಹಾಗೂ ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು. ಅವರುಗಳ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).

## 3.5 ವಾಸ್ತವಾಂಶಗಳನ್ನು ಬಚ್ಚಿಟ್ಟಿದ್ದ ಕಾರಣ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

"ಯಾವುದೇ ಸಾಧನದ ಮೇಲೆ ಶುಲ್ಕ ಅಥವಾ ಅದನ್ನು ವಿಧಿಸಬೇಕಾದ ಶುಲ್ಕದ ಮೊತ್ತವನ್ನು ವಿಧಿಸುವುದರ ಮೇಲೆ ಪರಿಣಾಮವನ್ನುಂಟು ಮಾಡುವ ಪ್ರತಿಫಲ ಹಾಗೂ ಇನ್ನಿತರ ಎಲ್ಲಾ ವಾಸ್ತವಾಂಶಗಳು ಮತ್ತು ಸಂದರ್ಭಗಳನ್ನು ಸಂಪೂರ್ಣವಾಗಿ ಹಾಗೂ ಪ್ರಾಮಾಣಿಕವಾಗಿ ನಿರೂಪಿಸತಕ್ಕದ್ದು" ಎಂಬುದಾಗಿ ಕರ್ನಾಟಕ ಮುದ್ರಾಂಕ ಶುಲ್ಕ ಅಧಿನಿಯಮ, 1957ರ ಪರಿಚ್ಛೇದ 28(1) ನಿರ್ದಿಷ್ಟಪಡಿಸಿದೆ.

ಕರ್ನಾಟಕ ಮುದ್ರಾಂಕ ಶುಲ್ಕ ಅಧಿನಿಯಮದ ಷೆಡ್ಯೂಲಿನ ಕಲಮು 5(ಇ) (i)ರ ಅಡಿಯಲ್ಲಿ, ಆಸ್ತಿಯ ಒಡೆತನವನ್ನು ನೀಡುವ ಅಥವಾ ಸಾಧನದ ಒಡಂಬಡಿಕೆಯನ್ನು ಕಾರ್ಯಗತಗೊಳಿಸದೆಯೇ ನೀಡಲು ಒಪ್ಪಿಗೆ ನೀಡಿರುವ ಸ್ಥಿರಸ್ವತ್ತಿನ ಮಾರಾಟಕ್ಕೆ ಸಂಬಂಧಿತ ಒಂದು ಒಡಂಬಡಿಕೆಗೆ ಸಂಬಂಧಿಸಿದಂತೆ ಮುದ್ರಾಂಕ ಶುಲ್ಕವು ಸ್ಥಿರಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲಿನ ವರ್ಗಾವಣೆಯ ಮೇಲೆ ವಿಧಿಸಲಾಗುವ ಮುದ್ರಾಂಕಶುಲ್ಕದ ದರವೇ ಆಗಿರುತ್ತದೆ.

ಮೇಲೆ ತಿಳಿಸಲಾದ ಷೆಡ್ಯೂಲಿನ ಕಲಮು 5(ಇ) ಅಡಿಯಲ್ಲಿನ ವಿವರಣೆ– Iರ ಪ್ರಕಾರ, ಅಂತಹ ಒಡಂಬಡಿಕೆಯ ವಿಷಯಕ ವಸ್ತುವಾಗಿರುವ ಆಸ್ತಿಗೆ ಸಂಬಂಧಿಸಿದಂತೆ ಮಾರಾಟವನ್ನು ಮಾಡುವವರು ಖರೀದಿಸುವವರಿಗೆ ಪ್ರತ್ಯೇಕವಾಗಿ ನೀಡಿರುವ ವ್ಯವಹಾರಾಧಿಕಾರಕ್ಕೆ ಸಂಬಂಧಿಸಿದಂತೆ ಒಂದು ಉಲ್ಲೇಖವನ್ನು ಒಡಂಬಡಿಕೆಯಲ್ಲಿ ಮಾಡಿದ್ದಲ್ಲಿ, ಆಗ ಈ ಷರತ್ತಿನ ಉದ್ದೇಶಕ್ಕಾಗಿ ಆಸ್ತಿಯನ್ನು ಕೊಳ್ಳುವವರಿಗೆ ನೀಡಲಾಗಿದೆಯೆಂಬುದಾಗಿ ಭಾವಿಸಲಾಗುವುದು.

ಒಡೆತನವನ್ನು ನೀಡಿರದಿದ್ದಲ್ಲಿ, ಕಲಮು 5(ಇ)(ii)ರ ಅಡಿಯಲ್ಲಿ ಗರಿಷ್ಠ ₹ 20,000ದ ಷರತ್ತಿಗೆ ಒಳಪಟ್ಟು ಶೇಕಡಾ 0.1ರ ದರದಲ್ಲಿ ಮುದ್ರಾಂಕ ಶುಲ್ಕವನ್ನು ವಿಧಿಸತಕ್ಕದ್ದು. ದಾಖಲೆಗಳ ಪರಿಶೀಲನೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

**3.5.1** ಚಿಕ್ಕಬಳ್ಳಾಪುರದ ಉಪ–ನೋಂದಣಿ ಕಚೇರಿಯಲ್ಲಿ ಒಂದು ಪ್ರಕರಣದಲ್ಲಿ ಓರ್ವ ಮಾರಾಟಗಾರರು ಹಾಗೂ ಓರ್ವ ಖರೀದಿದಾರರ ನಡುವೆ ಒಂದು ಪರಸ್ಪರ ತಿಳಿವಳಿಕೆ ಪತ್ರವನ್ನು ಮಾಡಿಕೊಳ್ಳಲಾಯಿತು (ಡಿಸೆಂಬರ್ 2011) ಹಾಗೂ ಆಸ್ತಿಯ ಒಡೆತನವನ್ನು ಭಾವಿ ಖರೀದಿದಾರರಿಗೆ ಹಸ್ತಾಂತರ ಮಾಡದಿದ್ದಲ್ಲಿ ಅನ್ವಯಗೊಳ್ಳುವ ₹ 20,000/– ಮುದ್ರಾಂಕ ಶುಲ್ಕ ಮತ್ತು ₹ 200/– ನೋಂದಣಿ ಶುಲ್ಕವನ್ನು ಪಾವತಿಸುವ ಮೂಲಕ ನೋಂದಾಯಿಸಲಾಯಿತು. ತದನಂತರ, ಪರಸ್ಪರ ತಿಳಿವಳಿಕೆ ಪತ್ರವನ್ನು ರದ್ದುಗೊಳಿಸಲಾಯಿತು (ಏಪ್ರಿಲ್ 2012) ಹಾಗೂ ಅದರಲ್ಲಿ ಆಸ್ತಿಯ ಒಡೆತನವನ್ನು ಮಾರಾಟಗಾರರಿಗೆ ಹಿಂತಿರುಗಿಸಲಾಗಿದೆ ಎಂಬುದಾಗಿ ತಿಳಿಸಲಾಗಿದ್ದಿತು. ಇದು, ಮೂಲ ಪರಸ್ಪರ ತಿಳಿವಳಿಕೆ ಪತ್ರದ ಪ್ರಕಾರ ಭಾವಿ ಖರೀದಿದಾರರು ಪರಸ್ಪರ ತಿಳಿವಳಿಕೆ ಪತ್ರದ ರದ್ದತಿಯವರೆಗೆ ಆಸ್ತಿಯ ಒಡೆತನವನ್ನು ಹೊಂದಿದ್ದರು ಎಂಬುದಾಗಿ ಅರ್ಥೈಸುತ್ತದೆ. ಆದ್ದರಿಂದ ಡಿಸೆಂಬರ್ 2011ರಲ್ಲಿ ಕಾರ್ಯಗತಗೊಳಿಸಲಾದ ಪರಸ್ಪರ ತಿಳಿವಳಿಕೆ ಪತ್ರಕ್ಕೆ ಪಾವತಿಸಬೇಕಾದ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ಒಡೆತನದ ಜೊತೆಯಲ್ಲಿ ಮಾರಾಟದ ಒಡಂಬಡಿಕೆಗೆ ಅನುಕ್ರಮವಾಗಿ ಅನ್ವಯಿಸುವ ₹ 58.10 ಲಕ್ಷ ಮತ್ತು ₹ 9.68 ಲಕ್ಷ ಎಂಬುದಾಗಿ ಪರಿಗಣಿಸಬೇಕಿದ್ದಿತು. ಈ ರೀತಿಯಾಗಿ, ವಾಸ್ತವಾಂಶಗಳನ್ನು ಬಚ್ಚಿಟ್ಟಿದ್ದುದು ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ಅನುಕ್ರಮವಾಗಿ ₹ 57.90 ಲಕ್ಷ ಮತ್ತು ₹ 9.68 ಲಕ್ಷ ಮೊತ್ತಗಳಷ್ಟು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿತು.

**3.5.2** ಮೂರು ಉಪ–ನೋಂದಣಿ ಕಚೇರಿಗಳಲ್ಲಿ[4], ಮೂರು ಪ್ರಕರಣಗಳಲ್ಲಿ ಸಾಮಾನ್ಯ ವ್ಯವಹಾರಾಧಿಕಾರಗಳನ್ನು ₹ 1.54 ಲಕ್ಷ ಮೊತ್ತದ ಮುದ್ರಾಂಕ ಶುಲ್ಕವನ್ನು ಪಾವತಿಸುವ ಮೂಲಕ ಜನವರಿ 2012 ಹಾಗೂ ಜೂನ್ 2012ರ ನಡುವಿನ ಅವಧಿಯಲ್ಲಿ ನೋಂದಾಯಿಸಲಾಯಿತು. ಮುಂದುವರೆದಂತೆ, ಅದೇ

---

[4] ಉಪ–ನೋಂದಣಿ ಅಧಿಕಾರಿಗಳು, ಬಸವನಗುಡಿ, ಚಿಕ್ಕಬಳ್ಳಾಪುರ ಮತ್ತು ಶಿವಾಜಿನಗರ

ತಂಡಗಳ ನಡುವೆ ಅದೇ ದಿನ ಅಥವಾ ತದನಂತರದ ದಿನಾಂಕಗಳಲ್ಲಿ ₹ 31,100 ಮುದ್ರಾಂಕ ಶುಲ್ಕ ಹಾಗೂ ₹ 500 ನೋಂದಣಿ ಶುಲ್ಕವನ್ನು ಪಾವತಿಸುವ ಮೂಲಕ ಮಾರಾಟ ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಯಿತು

ಒಡಂಬಡಿಕೆಗಳಲ್ಲಿ ತಿಳಿಸಲಾಗಿದ್ದ ಪ್ರತಿಫ಼ಲ ಅಥವಾ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದ ಪ್ರಕಾರ ಈ ಸಾಧನಗಳಲ್ಲಿನ ಆಸ್ತಿಗಳ ಒಟ್ಟಾರೆ ಮೌಲ್ಯವು ₹ 5.09 ಕೋಟಿ.

ಕಲಮು 5(ಇ) ಅಡಿಯಲ್ಲಿನ ವಿವರಣೆ-Iರ ಪ್ರಕಾರ ಈ ಮಾರಾಟ ಒಡಂಬಡಿಕೆಗಳಲ್ಲಿ, ₹ 28.80 ಲಕ್ಷ ಮೊತ್ತದ ಮುದ್ರಾಂಕ ಶುಲ್ಕ ಹಾಗೂ ₹ 5.08 ಲಕ್ಷ ಮೊತ್ತದ ನೋಂದಣಿ ಶುಲ್ಕವನ್ನೂ ಸಹ ವಿಧಿಸಬೇಕಿದ್ದಿತು.

ಸಂಬಂಧಿತ ಸಾಮಾನ್ಯ ವ್ಯವಹಾರಾಧಿಕಾರಗಳ ಮೇಲೆ ಪಾವತಿಸಲಾಗಿದ್ದ ಮುದ್ರಾಂಕ ಶುಲ್ಕವನ್ನು ಹೊಂದಾಣಿಕೆ ಮಾಡಿಕೊಂಡನಂತರ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕವು ₹ 32.02 ಲಕ್ಷ ಆಗಿದ್ದಿತು.

**3.5.3** ಮೂರು ಉಪ–ನೋಂದಣಿ ಕಚೇರಿಗಳಲ್ಲಿ[5] ಐದು ಪ್ರಕರಣಗಳಲ್ಲಿ, ಖರೀದಿದಾರರು ಮಾರಾಟ ಒಡಂಬಡಿಕೆಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಸಂಬಂಧಿತ ಮಾರಾಟಗಾರರಿಗೆ ₹ 50.49 ಲಕ್ಷ ಮೊತ್ತವನ್ನು ಪಾವತಿಸಿದ್ದರು (ಫ಼ೆಬ್ರವರಿ 2009 ಮತ್ತು ನವಂಬರ್ 2012). ಆದರೆ ಅದನ್ನು ತದನಂತರ (ಏಪ್ರಿಲ್ 2009 ಮತ್ತು ಫ಼ೆಬ್ರವರಿ 2013) ಕಾರ್ಯಗತಗೊಳಿಸಲಾದ ಮಾರಾಟ ಪತ್ರಗಳಲ್ಲಿ ಪ್ರತಿಫ಼ಲದ ಭಾಗವನ್ನಾಗಿ ನಮೂದಿಸಿರಲಿಲ್ಲ. ಆದ್ದರಿಂದ, ಈ ಪ್ರಕರಣಗಳಲ್ಲಿ, ₹ 2.91 ಲಕ್ಷ ಮೊತ್ತದಷ್ಟು ಮುದ್ರಾಂಕ ಶುಲ್ಕ ಹಾಗೂ ₹ 0.48 ಲಕ್ಷ ಮೊತ್ತದಷ್ಟು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು.

ಈ ಪ್ರಕರಣಗಳನ್ನು ಇಲಾಖೆಗೆ ಏಪ್ರಿಲ್ ಹಾಗೂ ಆಗಸ್ಟ್ 2013ರಲ್ಲಿ ಸ್ಪಷ್ಟಪಡಿಸಲಾಯಿತು ಹಾಗೂ ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು. ಅವುಗಳ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).

## 3.6 ಮುದ್ರಾಂಕ ಶುಲ್ಕ ಮತ್ತು ದಂಡವನ್ನು ವಿಧಿಸದಿದ್ದುದು

ಕರ್ನಾಟಕ ಮುದ್ರಾಂಕ ಶುಲ್ಕ ಅಧಿನಿಯಮದ ಪರಿಚ್ಛೇದ 34ರ ಅಡಿಯಲ್ಲಿ, ಮುದ್ರಾಂಕ ಶುಲ್ಕವನ್ನು ವಿಧಿಸಬೇಕಾದ ಯಾವುದೇ ಸಾಧನವನ್ನೂ ಅಂತಹ ಸಾಧನಕ್ಕೆ ಸಮರ್ಪಕವಾಗಿ ಮುದ್ರಾಂಕವನ್ನು ಛಾಪಿಸದ ಹೊರತು ಸಾಕ್ಷ್ಯಾಧಾರವಾಗಿ ಸ್ವೀಕರಿಸಲು ಕಾನೂನಾತ್ಮಕವಾಗಿ ತಂಡಗಳ ಅನುಮತಿಯಿಂದ ಅಥವಾ ಯಾವುದೇ ವ್ಯಕ್ತಿಯಿಂದ ಸಾಕ್ಷ್ಯಾಧಾರವಾಗಿ ಉದ್ದೇಶಕ್ಕಾಗಿ ಒಪ್ಪಿಕೊಳ್ಳುವಂತಿಲ್ಲ ಅಥವಾ ಅದರ ಆಧಾರದ ಮೇರೆಗೆ ವ್ಯವಹರಿಸುವಂತಿಲ್ಲ, ನೋಂದಣಿ ಮಾಡುವಂತಿಲ್ಲ ಅಥವಾ ಅಂತಹ ವ್ಯಕ್ತಿ ಅಥವಾ ಯಾವುದೇ ಸಾರ್ವಜನಿಕ ಅಧಿಕಾರಿಯವರೂ ದೃಢೀಕರಿಸುವಂತಿಲ್ಲ.

ಮುಂದುವರೆದು, ಕರಾರುವಾಕ್ಕಾದ ವಿನಾಯಿತಿಗಳನ್ನು ಹೊರತುಪಡಿಸಿದಂತೆ, ಅದಕ್ಕೆ ವಿಧಿಸಬೇಕಾದ ಮುದ್ರಾಂಕ ಶುಲ್ಕವನ್ನು ಪಾವತಿಸಿದನಂತರ ಅಥವಾ ಮುದ್ರಾಂಕ ಶುಲ್ಕವನ್ನು ಅಸಮರ್ಪಕವಾಗಿ ವಿಧಿಸಲಾಗಿರುವ ಸಾಧನಕ್ಕೆ ಕೊರತೆಯನ್ನು ನೀಗಲು ಅಗತ್ಯವಿರುವ ಮುದ್ರಾಂಕ ಶುಲ್ಕವನ್ನು ಸಮರ್ಪಕ ಮುದ್ರಾಂಕ ಶುಲ್ಕದ ಅಥವಾ ಕೊರತೆಯಿಂದ ಕೂಡಿದ ಭಾಗದ ಹತ್ತು ಪಟ್ಟು ಮೊತ್ತದ ದಂಡದ ಜೊತೆಗೆ, ಕೊರತೆಯ ಹತ್ತು ಪಟ್ಟು ಐದು ರೂಪಾಯಿಗಳನ್ನು ಮೀರಿದಲ್ಲಿ, ಅಂತಹ ಮುದ್ರಾಂಕದ ಅಥವಾ ಭಾಗದ ಹತ್ತು ಪಟ್ಟುಗಳಿಗೆ ಸಮನಾದ ಒಂದು ಮೊತ್ತದ ಜೊತೆಗೆ ವಿಧಿಸುವುದರ ಜೊತೆಗೆ ಸಾಕ್ಷ್ಯಾಧಾರವಾಗಿ ಒಪ್ಪಿಕೊಳ್ಳಬಹುದು ಎಂಬುದಾಗಿಯೂ ಅದು ಅನುವು ಮಾಡಿದೆ.

ಸಾಮಾನ್ಯ ವ್ಯವಹಾರಾಧಿಕಾರವನ್ನು ಹೊಂದಿರುವ ವ್ಯಕ್ತಿಗೆ ಆಸ್ತಿಯನ್ನು ಮಾರಾಟ ಮಾಡಲು ಅಧಿಕಾರವನ್ನು ನೀಡುವ ಸಾಮಾನ್ಯ ವ್ಯವಹಾರಾಧಿಕಾರಗಳಿಗೆ ಸಂಬಂಧಿಸಿದಂತೆ, ಅಂತಹ ಆಸ್ತಿಯ ವರ್ಗಾವಣೆಗೆ ಅನ್ವಯಗೊಳ್ಳುವ ದರದಲ್ಲಿ ಮುದ್ರಾಂಕ ಶುಲ್ಕವನ್ನು ವಿಧಿಸಬೇಕಿದ್ದಿತು.

ಮೂರು[6] ಉಪ–ನೋಂದಣಿ ಕಚೇರಿಗಳಲ್ಲಿ 2011–12 ಹಾಗೂ 2012–13 ಸಾಲುಗಳಲ್ಲಿ ಹನ್ನೊಂದು 'ಮಾರಾಟ ಪತ್ರಗಳು' ಹಾಗೂ ಒಂದು ಹಕ್ಕುಪತ್ರವನ್ನು ಖಾತರಿಯಾಗಿ ನೀಡಲು ಒಡಂಬಡಿಕೆ'ಗಳನ್ನು ಆಸ್ತಿಗಳ ಮಾಲೀಕರುಗಳ ಪರವಾಗಿ ಸಾಮಾನ್ಯ ವ್ಯವಹಾರಾಧಿಕಾರವನ್ನು ಹೊಂದಿದ್ದವರಿಂದ ಕಾರ್ಯಗತಗೊಳಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಪ್ರಕರಣಗಳಲ್ಲಿ, ಸಾಮಾನ್ಯ ವ್ಯವಹಾರಾಧಿಕಾರಗಳನ್ನು ಹೊಂದಿದ್ದವರಿಗೆ ಆಸ್ತಿಗಳನ್ನು ಮಾರಾಟ ಮಾಡುವ ಅಧಿಕಾರಗಳನ್ನು ನೀಡಲಾಗಿದ್ದಿತು ಹಾಗೂ ಸಾರ್ವಜನಿಕ ನೋಟರಿಯವರ ಮುಂದೆ ಫ಼ೆಬ್ರವರಿ 2009 ಹಾಗೂ ಜನವರಿ 2013ರ ನಡುವಿನ ಅವಧಿಯಲ್ಲಿ ಕಾರ್ಯಗತಗೊಳಿಸಲಾಗಿದ್ದಿತು ಹಾಗೂ ₹ 14,400ರಷ್ಟು ಮೊತ್ತದ ಮುದ್ರಾಂಕ ಶುಲ್ಕವನ್ನು ಮಾತ್ರ ಪಾವತಿಸಲಾಗಿದ್ದಿತು. ಮಾರಾಟ ಪತ್ರಗಳು/ಒಡಂಬಡಿಕೆಗಳ ಕಾರ್ಯಗತಗೊಳಿಸುವ ವೇಳೆಯಲ್ಲಿ ಈ ಸಾಮಾನ್ಯ

---

5 ಉಪ–ನೋಂದಣಿ ಅಧಿಕಾರಿಗಳು, ಬಿಜಾಪುರ, ಸದಲ್ಗ ಮತ್ತು ಯಲಹಂಕ

6 ಉಪ–ನೋಂದಣಿ ಅಧಿಕಾರಿಗಳು–ಬಸವನಗುಡಿ, ಭಟ್ಕಳ, ಹೆಸರಘಟ್ಟ

ವ್ಯವಹಾರಾಧಿಕಾರಗಳನ್ನು ಸಾಕ್ಷ್ಯಾಧಾರಗಳನ್ನಾಗಿ ಒಪ್ಪಿಕೊಳ್ಳಲಾಗಿದ್ದಿತಾದ್ದರಿಂದ, ಉಪ–ನೋಂದಣಿ ಅಧಿಕಾರಿಗಳು ಕರ್ನಾಟಕ ಮುದ್ರಾಂಕ ಶುಲ್ಕ ಅಧಿನಿಯಮದ ಅಡಿಯಲ್ಲಿ ವಿಧಿಸಬೇಕಾದ ಮುದ್ರಾಂಕ ಶುಲ್ಕ ಹಾಗೂ ಈಗಾಗಲೇ ಪಾವತಿಸಲಾಗಿರುವ ಮೊತ್ತದ ವ್ಯತ್ಯಾಸದ ಮೊತ್ತವನ್ನು ದಂಡದ ಜೊತೆಯಲ್ಲಿ ಪಾವತಿಸುವಂತೆ ಒತ್ತಾಯಿಸಬೇಕಿದ್ದಿತು ಹಾಗೂ ವಸೂಲಾತಿ ಮಾಡಬೇಕಿದ್ದಿತು. ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದ ಆಧಾರದ ಮೇರೆಗೆ, ಈ ಸಾಮಾನ್ಯ ವ್ಯವಹಾರಾಧಿಕಾರಗಳ ಮೇಲೆ ಪಾವತಿಸಬೇಕಾದ ಮುದ್ರಾಂಕ ಶುಲ್ಕವು ₹ 3.98 ಲಕ್ಷ ಆಗುತ್ತದೆ. ಇದು ₹ 3.84 ಲಕ್ಷ ಮೊತ್ತದ ಮುದ್ರಾಂಕ ಶುಲ್ಕವನ್ನು ಹಾಗೂ ಕೊರತೆಯ ಮುದ್ರಾಂಕ ಶುಲ್ಕದ 10 ಪಟ್ಟು ಅಂದರೆ ₹ 38.39 ಲಕ್ಷ ದಂಡವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿತು.

ಈ ಪ್ರಕರಣಗಳನ್ನು ಮೇ 2013 ಹಾಗೂ ಅಕ್ಟೋಬರ್ 2013ರ ನಡುವಿನ ಅವಧಿಯಲ್ಲಿ ಸ್ಪಷ್ಟಪಡಿಸಿದನಂತರ, ಕೊರತೆಯ ಮುದ್ರಾಂಕ ಶುಲ್ಕವನ್ನು ವಸೂಲಾತಿ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿ ಭಟ್ಕಳದ ಉಪ–ನೋಂದಣಿ ಅಧಿಕಾರಿಯವರು ತಿಳಿಸಿದರು (ಅಕ್ಟೋಬರ್ 2014).

ಈ ಅಂಶಗಳನ್ನು ನೋಂದಣಿಯ ಇನ್ಸ್‌ಪೆಕ್ಟರ್ ಜನರಲ್ ಮತ್ತು ಮುದ್ರಾಂಕ ಶುಲ್ಕ ಆಯುಕ್ತರವರಲ್ಲಿಯೂ ಕೈಗೆತ್ತಿಕೊಳ್ಳಲಾಯಿತು) ಹಾಗೂ ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು. ಅವರುಗಳ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).

## 3.7 ಮುದ್ರಾಂಕ ಶುಲ್ಕವನ್ನು ಸರ್ಕಾರದ ಲೆಕ್ಕಕ್ಕೆ ಕಡಿಮೆ ಪ್ರಮಾಣದಲ್ಲಿ ಪಾವತಿಸಿದ್ದುದು

ಕರ್ನಾಟಕ ಮುದ್ರಾಂಕ (ಇ–ಮುದ್ರಾಂಕ ಛಾಪಿಸುವಿಕೆ ಮೂಲಕ ಮುದ್ರಾಂಕ ಶುಲ್ಕ ಪಾವತಿ) ನಿಯಮಗಳು, 2009ರ ನಿಯಮ 4ರ ಅಡಿಯಲ್ಲಿ , ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಇದನ್ನು ಕೇಂದ್ರ ದಾಖಲೆ ನಿರ್ವಹಣಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಸಲುವಾಗಿ ನೇಮಕ ಮಾಡಲಾಯಿತು (ಜನವರಿ 2010). ಅದರಂತೆಯೇ, ಕರ್ನಾಟಕ ಸರ್ಕಾರ ಮತ್ತು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್‌ನ ನಡುವೆ ಒಂದು ಒಡಂಬಡಿಕೆ ಮಾಡಿಕೊಳ್ಳಲಾಯಿತು (25 ಜನವರಿ 2010).

ಮೇಲೆ ತಿಳಿಸಲಾದ ಒಡಂಬಡಿಕೆಯ ಪ್ರಕಾರ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್‌ನ ಕರ್ತವ್ಯಗಳು, ಇನ್ನಿತರವುಗಳ ಜೊತೆಗೆ, ಗಣಕಯಂತ್ರ ವ್ಯವಸ್ಥೆಗಳ ಮೂಲಕ ಮುದ್ರಾಂಕ ಶುಲ್ಕದ ವಸೂಲಾತಿ ಹಾಗೂ ಇ–ಮುದ್ರಾಂಕ ಪ್ರಮಾಣ ಪತ್ರಗಳನ್ನು ಹೊರತೆಗೆಯುವುದು" ಹಾಗೂ ವಸೂಲಾತಿ ಮಾಡಲಾದ ಮುದ್ರಾಂಕ ಶುಲ್ಕದ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಪಾವತಿಸುವುದು ಹಾಗೂ ಲೆಕ್ಕಪತ್ರಗಳನ್ನು ಸಮನ್ವಯಗೊಳಿಸುವುದು. ಒದಗಿಸಲಾದ ಸೇವೆಗಳಿಗಾಗಿ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಇ–ಮುದ್ರಾಂಕ ಛಾಪಿಸುವಿಕೆ ವ್ಯವಸ್ಥೆಯ ಮೂಲಕ ವಸೂಲಾತಿ ಮಾಡಿದ ಮುದ್ರಾಂಕ ಶುಲ್ಕದ ಶೇಕಡಾ 0.65ರಷ್ಟನ್ನು ಕಮಿಷನ್ ಆಗಿ ಪಡೆಯಲು ಅರ್ಹವಾಗಿದ್ದಿತು. ವಸೂಲಾತಿ ಮಾಡಲಾದ ಮುದ್ರಾಂಕ ಶುಲ್ಕವನ್ನು ಸರ್ಕಾರದ ಲೆಕ್ಕಕ್ಕೆ ಪಾವತಿಸುವ ಮೊದಲು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ತನ್ನ ಕಮಿಷನ್ ಅನ್ನು ಕಡಿದುಕೊಳ್ಳಲು ಒಡಂಬಡಿಕೆಯು ಅನುವು ಮಾಡಿದ್ದಿತು. ಈ ಕಮಿಷನ್ ಕೇಂದ್ರ/ರಾಜ್ಯ ಸರ್ಕಾರಗಳಿಗೆ ಪಾವತಿಸಬೇಕಾದ ಕಡ್ಡಾಯ ಶುಲ್ಕ/ಸುಂಕಗಳು ಹಾಗೂ ತೆರಿಗೆಗಳನ್ನೂ ಸಹ ಒಳಗೊಂಡಿದೆ ಎಂಬುದಾಗಿ ಒಡಂಬಡಿಕೆಯು ಸ್ಪಷ್ಟವಾಗಿ ತಿಳಿಸಿದ್ದಿತು.

ನೋಂದಣಿಯ ಇನ್ಸ್‌ಪೆಕ್ಟರ್ ಜನರಲ್ ಮತ್ತು ಮುದ್ರಾಂಕ ಶುಲ್ಕ ಆಯುಕ್ತರವರ ಕಚೇರಿಯಲ್ಲಿ ಜನವರಿ 2014ರಲ್ಲಿ ಮಾಡಲಾದ ಸಂಬಂಧಿತ ದಾಖಲೆಗಳ ಪರೀಕ್ಷಾ ಪರಿಶೀಲನೆಯು, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಜುಲೈ 2012ರಿಂದ ತನಗೆ ಅರ್ಹವಿರುವ ಕಮಿಷನ್ ಜೊತೆಗೆ ತಾನು ಕೇಂದ್ರ ಸರ್ಕಾರಕ್ಕೆ ಪಾವತಿಸಬೇಕಾದ ಸೇವಾ ತೆರಿಗೆಯನ್ನು ಕಮಿಷನ್ ಮೊತ್ತದ ಶೇಕಡಾ 12.36ರಂತೆ ಲೆಕ್ಕ ಹಾಕಿ ಕಡಿದುಕೊಳ್ಳುತ್ತಿದ್ದಿತು ಎಂಬುದನ್ನು ತೋರಿಸಿಕೊಟ್ಟಿತು. ಇದು, ರಾಜ್ಯ ಸರ್ಕಾರದ ಜೊತೆ ಮಾಡಿಕೊಂಡಿದ್ದ ಒಡಂಬಡಿಕೆಯ ಉಲ್ಲಂಘನೆಯಾಗಿದ್ದಿತು. ಡಿಸೆಂಬರ್ 2013ರವರೆಗೆ ಅಧಿಕವಾಗಿ ಮಾಡಲಾಗಿದ್ದ ಕಡಿದುಕೊಳ್ಳುವಿಕೆಯು ಸರ್ಕಾರದ ಲೆಕ್ಕಕ್ಕೆ ₹ 51.61 ಲಕ್ಷ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿತು. ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಅಧಿಕವಾಗಿ ಕಡಿದುಕೊಂಡಿದ್ದ ಮೊತ್ತವನ್ನು ವಸೂಲಾತಿ ಮಾಡಲು ನೋಂದಣಿಯ ಇನ್ಸ್‌ಪೆಕ್ಟರ್ ಜನರಲ್ ಮತ್ತು ಮುದ್ರಾಂಕ ಶುಲ್ಕ ಆಯುಕ್ತರವರು ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.

ಇದನ್ನು ಜನವರಿ 2014ರಲ್ಲಿ ಇನ್ಸ್‌ಪೆಕ್ಟರ್ ಜನರಲ್ ಮತ್ತು ಮುದ್ರಾಂಕಗಳ ಶುಲ್ಕ ಆಯುಕ್ತರವರ ಗಮನಕ್ಕೆ ತಂದನಂತರ, ವಿಷಯವನ್ನು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್‌ನ ಜೊತೆ ಕೈಗೆತ್ತಿಕೊಳ್ಳಲಾಗುವುದು ಎಂಬುದಾಗಿ ಉತ್ತರಿಸಿದರು. ವಿಷಯವನ್ನು ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು, ಅದರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).

## 3.8 ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕದ ಕಡೆಗೆ ನಗದು ರೂಪದಲ್ಲಿ ವಸೂಲಾತಿ ಮಾಡಲಾದ ರಾಜಸ್ವವನ್ನು ಸರ್ಕಾರದ ಲೆಕ್ಕಕ್ಕೆ ಪಾವತಿಸದಿದ್ದುದು

ಯಾವುದೇ ಸರ್ಕಾರಿ ನೌಕರರು ತಮ್ಮ ಅಧಿಕೃತ ಕಚೇರಿ ಸಾಮರ್ಥ್ಯದಲ್ಲಿ ಒಂದು ಹಣಕಾಸು ವ್ಯವಹಾರದ ಭಾಗಿಯಾಗಿರುವರೋ, ಅಂತಹ ನೌಕರರು ಯಾವುದೇ ಷರತ್ತುಗಳಿಲ್ಲದೆಯೇ, ಸರ್ಕಾರದ ಲೆಕ್ಕಕ್ಕೆ ತರತಕ್ಕದ್ದು ಹಾಗೂ ವಸೂಲಾತಿ ಮಾಡಿರುವ/ಸ್ವೀಕರಿಸಿರುವ ಸಂಪೂರ್ಣ ಹಣಕಾಸನ್ನು ಅನಗತ್ಯ ವಿಳಂಬವಿಲ್ಲದೇ, ಯಾವುದೇ ಸಂದರ್ಭದಲ್ಲಿಯೂ ಎರಡು ದಿನಗಳ ಒಳಗೆ ಸೂಕ್ತ ಲೆಕ್ಕಶೀರ್ಷಿಕೆಗೆ ಜಮೆ ಮಾಡುವುದಕ್ಕಾಗಿ ಹಾಗೂ ಸಾಮಾನ್ಯ ಖಜಾನೆ ಶಿಲ್ಕಿನ ಒಂದು ಭಾಗವನ್ನಾಗಿ ಮಾಡುವುದಕ್ಕಾಗಿ ಸರ್ಕಾರದ ಖಜಾನೆಗೆ ಪಾವತಿಸಬೇಕು, ಎಂಬುದಾಗಿ ಕರ್ನಾಟಕ ಹಣಕಾಸು ಸಂಹಿತೆ (ಕೆಎಫ್ಸಿ), 1958ರ ಕಲಮು 4 ನಿರ್ದಿಷ್ಟಪಡಿಸಿದೆ.

ಸರ್ಕಾರಿ ಅಧಿಕಾರಿಯ ಸುಪರ್ದಿನಲ್ಲಿರುವ ಸರ್ಕಾರದ ಹಣವನ್ನು ಖಜಾನೆ ಅಥವಾ ಬ್ಯಾಂಕಿಗೆ ಪಾವತಿಸಿದಾಗ, ಅಂತಹ ಪಾವತಿಯನ್ನು ಮಾಡುವ ಕಚೇರಿಯ ಮುಖ್ಯಸ್ಥರು ತಿಂಗಳು ಕಳೆದನಂತರ ಸಾಧ್ಯವಾದಷ್ಟು ತ್ವರಿತವಾಗಿ, ಸಂಬಂಧಿತ ತಿಂಗಳಿನಲ್ಲಿ ಮಾಡಲಾದ ಎಲ್ಲಾ ಪಾವತಿಗಳಿಗೆ ಖಜಾನೆಯಿಂದ ಒಂದು ಕ್ರೋಡೀಕೃತ ಸ್ವೀಕೃತಿ ಪತ್ರವನ್ನು ಪಡೆದುಕೊಳ್ಳಬೇಕು ಹಾಗೂ ನಗದು ಪುಸ್ತಕದಲ್ಲಿ ಮಾಡಲಾಗಿರುವ ಪಾವತಿ ದಾಖಲೆಗಳ ಜೊತೆ ತುಲನೆ ಮಾಡಬೇಕು ಎಂಬ ಅಗತ್ಯತೆಯನ್ನು ಕರ್ನಾಟಕ ಹಣಕಾಸು ಸಂಹಿತೆ (ಕೆಎಫ್ಸಿ)ಯಸ ಕಲಮು 329(v) ಹೊಂದಿದೆ.

ನೋಂದಣಿಯ ಇನ್ಸ್‌ಪೆಕ್ಟರ್ ಜನರಲ್ ಮತ್ತು ಮುದ್ರಾಂಕಗಳ ಶುಲ್ಕ ಆಯುಕ್ತರವರು, ಮಾರ್ಚ್ 2008ರಲ್ಲಿ ನೀಡಿದ್ದ ಸುತ್ತೋಲೆಯ ಮೂಲಕ ₹ 1000ವನ್ನು ಮೀರಿದ ಮೊತ್ತವನ್ನು ನಗದು ರೂಪದಲ್ಲಿ ವಸೂಲಾತಿ ಮಾಡದಂತೆ ಉಪ–ನೋಂದಣಿ ಅಧಿಕಾರಿಗಳಿಗೆ ನಿರ್ದೇಶಿಸಿದ್ದರು.

ಅತ್ತಿಬೆಲೆಯ ಉಪ–ನೋಂದಣಿ ಕಚೇರಿಯ 'ಎ' ವಹಿಯನ್ನು[7] ಖಜಾನೆಗೆ ಮಾಡಲಾಗುವ ಪಾವತಿಗಳ ವಹಿಗಳ ಜೊತೆ ಸಂಪರ್ಕಿಸಿ ಲೆಕ್ಕಪರಿಶೋಧನೆಯು ಮಾಡಿದ ಒಂದು ಸಮೀಕ್ಷೆಯು, ನಗದು ರೂಪದಲ್ಲಿ ವಸೂಲಾತಿ ಮಾಡಲಾದ ಮೊತ್ತಗಳನ್ನು ಸಂಪರ್ಕಸೇತು (ನೋಡಲ್) ಬ್ಯಾಂಕಿಗೆ ಜಮೆ ಮಾಡಿರುವಂತೆ ತೋರಿಸಲಾಗಿರುವುದನ್ನು ತಿಳಿಯಪಡಿಸಿತು. ಆದಾಗ್ಯೂ, ಪಾವತಿಗಳನ್ನು ಖಜಾನೆ ಷೆಡ್ಯೂಲುಗಳ ಜೊತೆ ಅಡ್ಡಪರಿಶಿಲನೆ ಮಾಡಲಾಗಿ, 18 ದೃಷ್ಟಾಂತಗಳಲ್ಲಿ ಏಪ್ರಿಲ್ 2011 ಹಾಗೂ ಸೆಪ್ಟಂಬರ್ 2012ರ ನಡುವೆ ನಗದು ರೂಪದಲ್ಲಿ ವಸೂಲಾತಿ ಮಾಡಲಾಗಿದ್ದ ಹಾಗೂ ನಗದು ಪುಸ್ತಕದಲ್ಲಿ ದಾಖಲಿಸಲಾಗಿದ್ದ ಹಾಗೂ ಸಂಪರ್ಕಸೇತು ಬ್ಯಾಂಕಿಗೆ ಪಾವತಿಸಿರುವಂತೆ ತೋರಿಸಲಾಗಿದ್ದ ₹ 42.46 ಲಕ್ಷ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿರಲಿಲ್ಲ. ಮುಂದುವರೆದು, ಈ ಕಚೇರಿಯು ಪ್ರಾರಂಭಗೊಂಡ ದಿನ ಅಂದರೆ 1 ಏಪ್ರಿಲ್ 2007ರಿಂದಲೂ, ಸಂಪರ್ಕಸೇತು ಬ್ಯಾಂಕಿಗೆ ಪಾವತಿಸಲಾದ ನಗದು ಪಾವತಿಗಳನ್ನು ಸರ್ಕಾರದ ಖಾತೆಗೆ ಮಾಡಲಾದ ಪಾವತಿಗಳ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಖಜಾನೆ ಷೆಡ್ಯೂಲುಗಳ ಜೊತೆ ಸಮನ್ವಯಗೊಳಿಸಿರಲಿಲ್ಲ.

ಇದನ್ನು ಉಪ–ನೋಂದಣಿ ಅಧಿಕಾರಿಯವರಿಗೆ 4 ಮಾರ್ಚ್ 2014ರಂದು ಸ್ಪಷ್ಟಪಡಿಸಿದನಂತರ, ಉಪ–ನೋಂದಣಿ ಅಧಿಕಾರಿಯವರು ₹ 42.46 ಲಕ್ಷ ಸಂಪೂರ್ಣ ಮೊತ್ತವನ್ನು 07-03-2014, 10-03-2014, 11-03-2014 ಹಾಗೂ 12-03-2014 ದಿನಾಂಕಗಳ ಚಲನ್ನುಗಳ ಮೂಲಕ ಸರ್ಕಾರದ ಲೆಕ್ಕಕ್ಕೆ ಪಾವತಿಸಿದರು. ಮೇಲೆ ತಿಳಿಸಲಾದ ಮೊತ್ತವನ್ನು ಎರಡರಿಂದ ಮೂರು ವರ್ಷಗಳವರೆಗೆ ದುರುಪಯೋಗಪಡಿಸಿಕೊಳ್ಳಲಾಗಿದ್ದಿತು ಎಂಬುದು ಸುಸ್ಪಷ್ಟಗೊಳ್ಳುವುದರಿಂದ, ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಜವಾಬ್ದಾರಿ/ಉತ್ತರದಾಯಿತ್ವವನ್ನು ನಿಗದಿಪಡಿಸುವುದಕ್ಕಾಗಿ ಒಂದು ಸವಿವರ ತನಿಖೆಯನ್ನು ನಡೆಸುವುದನ್ನು ಈ ವಿಷಯವು ಅಪೇಕ್ಷಿಸುತ್ತದೆ.

ವಿಷಯವನ್ನು ಇನ್ಸ್‌ಪೆಕ್ಟರ್ ಜನರಲ್ ಮತ್ತು ಮುದ್ರಾಂಕ ಶುಲ್ಕ ಆಯುಕ್ತರವರ ಜೊತೆ ಮೇ 2014ರಲ್ಲಿ ಕೈಗೆತ್ತಿಕೊಳ್ಳಲಾಯಿತು ಹಾಗೂ ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).

---

[7] ಪ್ರತಿಯೊಂದು ದಸ್ತಾವೇಜಿಗೆ ಸಂಬಂಧಿಸಿದಂತೆಯೂ ವಸೂಲಾತಿ ಮಾಡಲಾದ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕದ ದಿನವಾರು ಸ್ವೀಕೃತಿಗಳನ್ನು ದಾಖಲಿಸಲು ಉಪ–ನೋಂದಣಿ ಅಧಿಕಾರಿಯವರ ಕಚೇರಿಯಲ್ಲಿ ಇಟ್ಟಿರುವ ವಹಿ.